ದಿನಾಂಕಃ 05.10.2016ರಂದು ಸಾಕ್ಷಿಯನ್ನು ಪುನಃಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟಿಸವಾಲುಃ ಶ್ರೀ ಕೆಆರ್‌ಎಂ. ವಕೀಲರಿಂದಃ 2ನೇ ಪ್ರತಿವಾದಿ ಪರಃ ನನಗೆ ಓದುಬರಹ ಬರುವುದಿಲ್ಲ. 2ನೇ ವಾದಿ ನನ್ನ ತಂಗಿ, ಅವರು ಓದಿದ್ದಾರೆ. 1ನೇ ಪ್ರತಿವಾದಿ ನನ್ನ ಅಕ್ಕ, ಅವರಿಗೂ ಓದುಬರಹ ಬರುವುದಿಲ್ಲ. 2ನೇ ವಾದಿ ನನ್ನ ಜೊತೆ ಬಂದಿದ್ದಾರೆ ಮತ್ತು ಅವರು ಕೋರ್ಟ್ ಮುಂದಿದ್ದಾರೆ. ನನ್ನ ಮದುವೆಯಾಗಿದ್ದು ಯಾವ ವರ್ಷ ಎಂದು ಹೇಳಲು ಬರುವುದಿಲ್ಲ. ನಮ್ಮ ತಂದೆ ಮುನಿಹನುಮಪ್ಪರವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ನಾಲ್ಕು ಜನ ಹೆಣ್ಣುಮಕ್ಕಳು ಅವರಲ್ಲಿ ಚಿಕ್ಕನಾಗಮ್ಮ ತೀರಿದ್ದಾರೆ. ನಮ್ಮ ತಂದೆಗೆ ಅವರ ತಂದೆಯಿಂದ ದೊಡ್ಡಕನ್ನಲೆಯಲ್ಲಿ ಆರು ಎಕರೆ ಜಮೀನು ಬಂದಿತ್ತು ಮತ್ತು ಅದರಲ್ಲಿ ಸ್ವಲ್ಪ ಭಾಗ ಅವರು ಮಾರಿದ್ದರು, ಅದರ ಸರ್ವೆ ನಂ.110/1. ನಮ್ಮ ತಂದೆಗೆ ಕನ್ನಳ್ಳಿಯಲ್ಲಿ ಕೇವಲ ಮೂವತ್ತೇಳೂವರೆ ಗುಂಟೆ ಮಾತ್ರ ಬಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ನಾವು ಕೇಸ್ ಹಾಕಿರುವುದೇ ಅದಕ್ಕೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ದಾವಾಸ್ವತ್ತು ಹೊರತುಪಡಿಸಿ ಮನೆ ಮತ್ತು ಬೇರೆ ಸ್ವತ್ತು ಇದ್ದವು, ಆದರೆ ಅದರ ಸರ್ವೆ ನಂಬರ್ ಗೊತ್ತಿಲ್ಲ. ಸದರಿ ಸ್ವತ್ತುಗಳನ್ನು ಈ ದಾವೆಯಲ್ಲಿ ಕಾಣಿಸಿಲ್ಲ ನಿಜ.

2. ನಮ್ಮ ತಂದೆಗೆ ವರ್ತೂರು ಹೋಬಳಿ, ಭೋಗನಹಳ್ಳಿಯಲ್ಲಿ ಸರ್ವೆ ನಂ.65 ಮತ್ತು 66ರಲ್ಲಿ ಒಂದು ಎಕರೆ ಇಪ್ಪತ್ತಾರು ಗುಂಟೆ ಇತ್ತು ಎಂಬುದು ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ನಮ್ಮ ತಂದೆ ಪಾರ್ವತಮ್ಮನ ಮದುವೆಗಾಗಿ ಮಾರಿದರು ಎಂಬುದು ನನಗೆ ಗೊತ್ತಿಲ್ಲ. ಪಾರ್ವತಮ್ಮ ಅಂದರೆ ನಾನೇ ನಿಜ.

1972-73ನೇ ಸಾಲಿನಲ್ಲಿಯೇ ನನ್ನ ಮದುವೆಗಾಗಿ ಸದರಿ ಜಮೀನನ್ನು ಮಾರಾಟ ಮಾಡಿ ನನಗೆ ಏನು ಕೊಡಬೇಕೋ ಅದನ್ನೆಲ್ಲಾ ಕೊಟ್ಟಿರುವುದರಿಂದ ಈ ದಾವೆಯಲ್ಲಿ ಯಾವುದೆ ಪರಿಹಾರ ಪಡೆಯಲು ಅರ್ಹಳಲ್ಲ ಎಂಬುದು ಸರಿಯಲ್ಲ. ದಿ:16-11-2011 ರಂದು ನಾನು, ನಮ್ಮ ಸಹೋದರಿಯರು ಮತ್ತು ಸಹೋದರರು ಸೇರಿ ಆದರ್ಶ ನೆಸ್ಟ್ ಪ್ರೈವೇಟ್ ಲಿಮಿಟೆಡ್‌ರವರಿಗೆ ಭೋಗನಹಳ್ಳಿ ಗ್ರಾಮದ ಸರ್ವೆ ನಂ.75/4ರ 36 ಗುಂಟೆ ಮಾರಾಟ ಮಾಡಿದೆವು ಎಂಬುದು ನನಗೆ ನೆನಪಿಲ್ಲ. ಹಾಗೆ ಮಾರಾಟ ಮಾಡಿ ನಿಮ್ಮ ಭಾಗದ ಹಣವನ್ನೂ ಪಡೆದಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ರೂ.5,00,000/- ನಾನು ಪಡೆದಿದ್ದೇನೆ. ಒಬ್ಬ ಶ್ರೀಮತಿ ಕಮಲಮ್ಮ ಮತ್ತು ಅವರ ಮಕ್ಕಳಾದ ರಮೇಶ್ ಹಾಗೂ ಆನಂದ್ ಸೇರಿ ಓ.ಎಸ್.ನಂ.25433/2016ರಲ್ಲಿ ದಾವೆ ಹಾಕಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾವೆಲ್ಲಾ ಪಾರ್ಟಿಯಾಗಿದ್ದೇವೆ ಎಂಬುದೂ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾವು ಮತ್ತು ನಮ್ಮ ಅಣ್ಣತಮ್ಮಂದಿರು ಸೇರಿ ವಕೀಲರನ್ನೂ ಕೂಡಾ ನೇಮಿಸಿಕೊಂಡಿದ್ದೇವೆ ಎಂಬುದು ಸರಿಯಲ್ಲ.

3. ಐಟಂ-1 ಸ್ವತ್ತು ಮೂವತ್ತೇಳೂವರೆ ಗುಂಟೆ ಕುರಿತು ಈಗಾಗಲೇ 7ನೇ ಪ್ರತಿವಾದಿ ಜೊತೆ ನಾವು ರಾಜಿ ಮಾಡಿಕೊಂಡಿದ್ದೇವೆ. ಮೊದಲು ದಾವೆ ಮಾಡಿದಾಗ ಐಟಂ-1 ಸ್ವತ್ತು ಮಾತ್ರ ಇತ್ತು ನಿಜ. ತದನಂತರ ಐಟಂ-2 ಸೇರಿಸಿದ್ದೇವೆ ನಿಜ. ಸರ್ವೆ ನಂ.110 ಒಟ್ಟು ಎಷ್ಟಿತ್ತು ಎಂಬುದು ನನಗೆ ಗೊತ್ತಿಲ್ಲ. ಐಟಂ-2 ನಾಲ್ಕು ಗುಂಟೆ ಸ್ವತ್ತಿಗೆ ನಮ್ಮ ಅಣ್ಣ 2ನೇ ಪ್ರತಿವಾದಿ ಮುನಿರೆಡ್ಡಿ ಕಾಂಪೌಂಡ್ ಹಾಕಿದ್ದಾರೆ. ಸರ್ವೆ ನಂ.110 ಒಟ್ಟು ಮೂರು ಎಕರೆ ಹದಿನಾಲ್ಕು ಗುಂಟೆ ಇತ್ತು ಮತ್ತು ಅದರಲ್ಲಿ

ಮೂರು ಗುಂಟೆ ಖರಾಬು ಇತ್ತು ಎಂಬುದು ನನಗೆ ಗೊತ್ತಿಲ್ಲ. ಈ ಸರ್ವೆ ನಂಬರ್ ಕುರಿತು ನಮ್ಮ ತಾತ ಹಾಗೂ ಅವರ ಅಣ್ಣತಮ್ಮಂದಿರಲ್ಲಿ ವಿವಾದ ಇತ್ತು ಎಂಬುದು ನನಗೆ ಗೊತ್ತಿಲ್ಲ. ಹೀಗೆ ಆ ಸಮಯದಲ್ಲಿ ಗಲಾಟೆ ನಡೆಯುತ್ತಿರುವುದರಿಂದ ನಮ್ಮ ತಾತ ಮತ್ತು ಅವರ ಅಣ್ಣತಮ್ಮಂದಿರು ಸರ್ವೆ ನಂ.110/1ರಲ್ಲಿ ಮೂವತ್ತೇಳೂವರೆ ಗುಂಟೆಯಂತೆ ಹಂಚಿಕೊಂಡಿದ್ದರು ಎಂಬುದು ನನಗೆ ಗೊತ್ತಿಲ್ಲ. ಐಟಂ-2 ಸ್ವತ್ತು ಐಟಂ-1ರ ಭಾಗವೇ ಎಂಬುದು ಸರಿಯಲ್ಲ. ಈಗಾಗಲೇ ಐಟಂ-1ರ ಸ್ವತ್ತು ಕುರಿತು ನಾವು ರಾಜಿ ಮಾಡಿಕೊಂಡಿರುವುದರಿಂದ ಐಟಂ-2ರ ಸ್ವತ್ತಿನಲ್ಲಿ ಯಾವುದೆ ಭಾಗ ಬರದು ಎಂಬುದು ಸರಿಯಲ್ಲ. ಈ ಐಟಂ-2 ನಾಲ್ಕು ಗುಂಟೆ ಸ್ವತ್ತಿನ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ನಮ್ಮ ಅಣ್ಣತಮ್ಮಂದಿರು ಮತ್ತು ನನ್ನನ್ನು ಹೊರತುಪಡಿಸಿ ಇತರೆ ಸಹೋದರಿಯರು ಅನ್ಯೋನ್ಯವಾಗಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು 2ನೇ ವಾದಿ ನನ್ನ ಜೊತೆ ದಾವೆ ಮಾಡಿಲ್ವಾ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಕೋರ್ಟಿಗೆ ಹೋಗುವುದು ಬೇಡ ಅಂತ ನನಗೆ ಉಪದೇಶ ಮಾಡಿದರು ಎಂಬುದು ಸರಿಯಲ್ಲ. ಈ ಕೇಸ್ ಹಾಕುವ ಮೊದಲು ನನ್ನ ಸಹೋದರರನ್ನು ಭಾಗಕ್ಕಾಗಿ ಕೇಳಿದಾಗ ಸ್ವತ್ತು ಮಾರಿದಾಗ ಕೊಡುವುದಾಗಿ ಹೇಳಿದ್ದರು. ದಾವೆ ಹಾಕಿದ ಮೇಲೇನೂ ಕೇಳಿಲ್ಲ ಎಂದು ಸ್ವಯಂ ನುಡಿಯುತ್ತಾರೆ. ಯಾವ ದಿನ ಪಂಚಾಯಿತಿ ಆಯಿತು ಎಂಬುದು ಗೊತ್ತಿಲ್ಲ. 1ನೇ ಪ್ರತಿವಾದಿಯನ್ನು ನಾನೇನು ಕೇಳಿಲ್ಲ. ಸಾಕ್ಷಿಯು ಸ್ವಯಂ ನುಡಿಯುತ್ತಾ ಹದಿನೈದು ವರ್ಷವಾಯಿತು ಅವರ ಜೊತೆ ಮಾತಿಲ್ಲ. ಐಟಂ-2ರ ಸ್ವತ್ತಿನಲ್ಲಿ ಯಾವುದೆ ಭಾಗ ಬರಬೇಕಿಲ್ಲ, ನಮಗೆ ಕೊಡಬೇಕಾದ ಭಾಗವನ್ನು

ಈಗಾಗಲೇ ಅವರು ಕೊಟ್ಟಿದ್ದಾರೆ ಎಂಬುದು ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿದೆ ಎಂಬುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,

(ಕೃಷ್ಣಮೂರ್ತಿ ಬಿ.ಸಂಗಣ್ಣನವರ್)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.